# ನೈಜ ಶಿಕ್ಷಣ ಕಲಿಸುವ ಜಾದೂ ತರಹದ ನಡುಗಡ್ಡೆ!

ನಾನು ಚಿಕ್ಕವನಿದ್ದಾಗ ಕಲಿತ ಶಾಲೆಯಲ್ಲಿಯ ಶಿಕ್ಷಣವನ್ನು ಇಂದು ನನ್ನ ಮಗ, ಆನಂದನಿಗೆ ಕೊಡಲು ಶಕ್ಯವಿಲ್ಲ ಎಂಬುದು ತಿಳಿದಾಗ ನನಗೆ ಬಹಳ ವಿಷಾದ ವಾಯಿತು.*ನಮ್ಮ ಚಿಕ್ಕಂದಿನಲ್ಲಿಯ ಕತೆಯೆ ಬೇರೆ, ಈಗೀನ ಕತೆಯೆ  ಬೇರೆ!* ಎಂದೆನ್ನುತ್ತ ನಿಟ್ಟುಸಿರು ಬಿಡುವದು ವೃದ್ಧತ್ವದ ಲಕ್ಷಣವೆಂದು ನನಗೆ ಗೊತ್ತಿದ್ದರೂ ನನಗೆ ನಿಜವಾಗಿಯೂ ವಿಷಾದವಾಗುತ್ತಲಿದೆ. ನನ್ನ ಆ ಶಾಲೆಯಲ್ಲಿ ಅಂತಹ ವಿಶೇಷವೇನಿತ್ತು?

ಒಂಬತ್ತನೆ ತರಗತಿವರೆಗಿನ ನನ್ನ ಶಿಕ್ಷಣ ಗಾಂಧೀಜೀಯವರ ನಯೀ ತಾಲೀಮ ಎಂಬ ಶಿಕ್ಷಣ ಪದ್ಧತಿಯನುಸಾರವಾಯಿತು. ಅದರಲ್ಲಿಯೂ ಸೇವಾಗ್ರಾಮ ಆಶ್ರಮದಲ್ಲಿಯ ನಯೀ ತಾಲೀಮ ವಿದ್ಯಾಲಯದಲ್ಲಿಯೇ ನಾನು ನಾಲ್ಕು ವರುಷ ಕಲಿತೆ. ಶಿಕ್ಷಣವೆಂದರೆ ನಿಸರ್ಗದಿಂದ ಕಿತ್ತೆಸೆದು ನಾಲ್ಕು ಗೋಡೆಗಳೊಳಗೆ ಹಿಡಿದಿಟ್ಟು ಬೇಜಾರು ತರುವ  ಪಾಠಗಳಲ್ಲ; ಪ್ರಕೃತಿಯ ಜತೆ ಇದ್ದೇ ಸಮಾಜಕ್ಕೆ ಉಪಯೊಗವಾಗುವಂತಹ ಸಂಸ್ಕಾರ, ಬೌದ್ಧಿಕ ವಿಕಾಸ ಹಾಗು ಕುಶಲತೆ ಪ್ರಾಪ್ತಗೊಳಿಸುವ ಗಾಂಧೀಜೀ ಪ್ರಣೀತ ನಯೀ ತಾಲೀಮ ಶಿಕ್ಷಣ ಪದ್ಧತಿಯಲ್ಲಿದೆ.    ರವೀಂದ್ರನಾಥ ಟಾಗೋರರ ಶಾಂತಿನಿಕೇತನದಲ್ಲಿಂದ ಶ್ರೀಬಾರ್ಯನಾಯಕಮ್ ಹಾಗು ಶ್ರಿಮತಿ ಆಶಾದೇವಿ ಈ ದಂಪತಿಗಳು ಗಾಂಧೀಜೀಯವರ ಕನಸಿನಲ್ಲಿಯ ಈ ಶಿಕ್ಷಣ ಪದ್ಧತಿಯನ್ನು ಕಲಿತು ಬಂದಿದ್ದರು. ಗಾಂಧೀಜೀಯವರ ಶಿಕ್ಷಣಪದ್ಧತಿಗೆ ಟಾಗೋರರ ನಿಸರ್ಗದ ಕಲಾ ಪ್ರೇಮದ ಜತೆ ದೊರಕಿತು. ಅವರೇ ಈ ಸಾಲೆಯನ್ನು ಪ್ರಾರಂಭಿಸಿದರು. ನನ್ನ ತಂದೆ-ತಾಯಿ  ಈ ಪ್ರಯೋಗದಲ್ಲಿ ಭಾಗವಹಿಸಿದರು. ಈ ಶಾಲೆಯಲ್ಲಿಯ ಶಿಕ್ಷಣಪದ್ಧತಿ ಎಷ್ಟು ಬೇರೆಯಾಗಿತ್ತೆಂಬುದನ್ನು ನಾನು ನಿಮಗೆ ಹೇಳಬಯಸುತ್ತೇನೆ.

**ಪ್ರಾಣಿಗಳ ಪರಿಚಯ**

ಅರಣ್ಯ ಮತ್ತು ಅರಣ್ಯಗಳಲ್ಲಿ ವಾಸಿಸುವ ಕಾಡುಪ್ರಾಣಿಗಳ ಸಂರಕ್ಷಣೆ ಎಂಬುದರ ಬಗ್ಗೆ ಹರಟೆ ಮಾತನ್ನಡುತ್ತಿರುವದು ಈಗೀನ ಕಾಲದ ಒಂದು fashion ಆಗಿದೆ. ಆದರೆ 25-30 ವರುಷಗಳ ಹಿಂದೆ ಬರೀ ಒಣ ಚರ್ಚೆ ಮಾಡದೆ ನನ್ನ ಶಾಲೆಯ ಪಾಟೀಲ ಗುರುಗಳು ಹಲಸಿನ ಗಿಡದ ದಟ್ಟವಾದ ಟೊಂಗೆಗಳ ಮೇಲೆ ಕೂಡಿಸಿ  ನಮಗೆ ಇದನ್ನೆಲ್ಲ ಕಲಿಸುತ್ತಿದ್ದರು. ಕಾಡಿನಲ್ಲಿಯ ಜೀವನ, ಮೈ ನವಿರೇಳಿಸುವ ಕಾಡುಪ್ರಾಣಿಗಳ  ಬೇಟೆಯ ಕತೆಗಳು, ಗರ್ಭಿಣಿಯಾದ ಚಿಗರೆಯ ಬೇಟೆಯಿಂದಾದ ಅತೀವ ವೇದನೆ, ಆ ನಂತರದ ಕೋವಿಯನ್ನು ದೂರೆಸೆದ ಪ್ರಸಂಗ, ರಾತ್ರಿಯ ಕತ್ತಲೆಯಲ್ಲಿ ಅರಣ್ಯದಲ್ಲಿಯ ಕೆರೆಯ ಸುತ್ತಮುತ್ತಲಿನ ಕಾಡುಪ್ರಾಣಿಗಳ ದರ್ಶನ, ಇದರಿಂದಾಗಿ ಪ್ರಾಣಿಗಳ ಮೇಲಿನ ಮಮತೆ, ಇವೆಲ್ಲವುಗಳನ್ನು ನಾವು ಕಿವಿಗೊಟ್ಟು ಆಲಿಸುತ್ತಿದ್ದೆವು. ಇಂತಹ ಕತೆಗಳನ್ನು ಕೇಳುತ್ತಲೆ ನಾವು ಬೆಳೆದೆವು. ಈ ಅರಣ್ಯ ಪಾಠಗಳಿಂದಲೆ ನಮಗೆ ಅರಣ್ಯ ಮತ್ತು ಕಾಡುಪ್ರಾಣಿಗಳ ಮೇಲಿನ ಪ್ರೀತಿ ಹೆಚ್ಚುತ್ತ ಹೋಯಿತು. ಅವುಗಳ ಪರಿಚಯವಾಯಿತು. ಒಣ ಪಾಠಗಳಲ್ಲಿಯ ಪಶು-ಪಕ್ಷಿಗಳ ಹೆಸರಿನ ಜಂತ್ರಿಯನ್ನು ಚಿತ್ರಗಳಲ್ಲಿ ನೊಡಿ ನೆನಪಿನಲ್ಲಿಡುವ ಈಗಿನ ರೀತಿ ನನ್ನ ಮಕ್ಕಳಿಗೆ ಮೀಸಲಾಗಿದೆ. ಗಡಚಿರೋಲಿಯಂತಹ ಕಾಡಿನಲ್ಲಿರುವ ಜಿಲ್ಹೆಯಲ್ಲಿ ಕೂಡ ಅರಣ್ಯ ಹಾಗು ಶಾಲೆಗಳ ಮಧ್ಯ ಯಾವದೆ ನೆಂಟುತನ ಈಗಿಲ್ಲ.

**ಸಂತರ ಸಂಗತಿ**

ಸಂತ ತುಕಾರಾಮ ಇವರ ಪದ (ಅಭಂಗ)ಗಳನ್ನು ನಾವು ಕಹಿ ಔಷಧಿಯನ್ನು ಕುಡಿದಂತೆ ಕಲಿಯಲಿಲ್ಲ. ಆಷಾಢ ತಿಂಗಳಿನ ಏಕಾದಶಿಯ ದಿನಗಳಲ್ಲಿ ನಮ್ಮ ಶಾಲೆಯಲ್ಲಿ ಒಂದು ಬಗೆಯ 'ಸಂತರ ಸಮ್ಮೇಲನ'ವೇ ಸೇರುತ್ತಿತ್ತು.  ಬೇರೆ ಬೇರೆ ಸಂತರ ಭಜನೆಗಳನ್ನು ಹಾಡುವದು, ಸಂತರ ಜೀವನ ಚರಿತ್ರವನ್ನು ಆಧರಿಸಿದ ನಾಟಕಗಳನ್ನು ಮಾಡುವದು, ಭಾಷಣ, ಲೇಖನ, ಸಂತರ ಚಿತ್ರಗಳು, ಇವುಗಳದೇ ಆದ ಒಂದು ಹಸ್ತಲಿಖಿತದ ಭಿತ್ತಿಪತ್ರಿಕೆ, ಇಂತಹ ಕಾರ್ಯಕ್ರಮಗಳಿಂದಲೇ ಈ 10-15 ದಿನಗಳು ಹೇಗೆ ಸರಿಯುತ್ತಿದ್ದವೊ ಗೊತ್ತಗುತ್ತಿರಲಿಲ್ಲ. ಇವರ ಪದಗಳನ್ನು ಹಾಡುತ್ತಿರುವಾಗಲೆ ಭೈರವಿ ರಾಗದ ಪರಿಚಯ ನನಗೆ ಆಯಿತು. ಸಂತರ ಕಾವ್ಯ, ಅವರ ಇತಿಹಾಸ, ಅವರ ತತ್ತ್ವಜ್ಞಾನ, ಮುಂತಾದವುಗಳನ್ನು ನಾವು ಸುಲಭವಾಗಿ ಕಲಿಯುತ್ತ ಹೋದೆವು. ಆಗ ಇಂತಹ ವಿಷಯಗಳಿಗಾಗಿ ಸ್ವತಂತ್ರವಾಗಿ ಪಿರಿಯಡ್ಡುಗಳು ಇರಲಿಲ್ಲ.

**ಸಸ್ಯವಿಜ್ಞಾನ ಕಲಿತ ಬಗೆ**

ಸುಮಾರಷ್ಟು ಸಾಲೆಗಳಲ್ಲಿಯ ಸಸ್ಯವಿಜ್ಞಾನದ ಪರಿಚಯವನ್ನು ಪುಸ್ತಕಗಳಲ್ಲಿಯ ಆಕೃತಿ ನೋಡಿ ಇಲ್ಲವೆ ಗಾಜಿನ ಪಾತ್ರೆಗಳಲ್ಲಿ ಹಿಡಿದಿಟ್ಟ ವಿವಿಧ ಪ್ರಕಾರಗಳ ಎಲೆ, ಹೂವು ಗಳ ಮಾಹಿತಿಯನ್ನು ಕಂಠಪಾಠ ಮಾಡಿ ಪರೀಕ್ಷೆಯಾದ ಮರುದಿನವೇ ಮರೆತುಬಿಡುವ ಎಷ್ಟೋ ವಿದ್ಯಾರ್ಥಿಗಳನ್ನು ನೀವು ನೊಡಿರಬಹುದು. ನಯೀ ತಾಲೀಮ ವಿದ್ಯಾಲಯದಲ್ಲಿ ಮಾತ್ರ ನಮ್ಮೆಲ್ಲರನ್ನು ಸಾಲೆಯ ಸುತ್ತಮುತ್ತಲಿರುವ ಹೊಲ-ಗದ್ದೆಗಳಿಗೆ ಇಲ್ಲವೆ  ಸಮೀಪದಲ್ಲಿರುವ ಕಾಡಿನಲ್ಲಿಯೇ ಕರೆದುಕೊಂಡು ಹೋಗಿ ಕಲಿಸುವ ಪರಿಪಾಠವಿತ್ತು. ಮೊದಮೊದಲು ನಮ್ಮನ್ನು ನಡೆಸುತ್ತ ಹೋದಂತೆ ಇದು ಈ ಗಿಡ, ಈ ಹೂವು, ಎಂದು ಬಣ್ಣಿಸುತ್ತ ಹೋಗುತ್ತಿದ್ದರು. ಇದರಿಂದ ಎಲೆ, ಹೂವು, ಹಣ್ಣು ಗುರುತಿಸುವ ಬಗೆ ಗೊತ್ತಾಗುತ್ತಿತ್ತು. ನಾವು ಬಾರೆಕಾಯಿ, ಹುಣಿಸೆಕಾಯಿ, ನೆಲ್ಲಿಕಾಯಿಗಳನ್ನು ಕಲ್ಲೆಸೆದು ಕೆಳಬಿದ್ದದ್ದನ್ನು ತಿನ್ನುತ್ತಲೆ ಸಸ್ಯವಿಜ್ಞಾನ ಕಲಿತೆವು. ಈ ರೀತಿಯಾಗಿ ತಿನ್ನುತ್ತ ತಿನ್ನುತ್ತ ಕಲಿಯುವ ಪದ್ಧತಿಯನ್ನು ನಾನು ಅಮೇರಿಕೆಗೆ ಬಂದಾಗಲೆ ನೋಡಿದ್ದು.  ಆದರೆ ಅಲ್ಲಿ ಕೇವಲ ಚಾಕಲೇಟ, ಚ್ಯೂಯಿಂಗ ಗಮ್ ಕಚ್ಚುವ ಹಾಗು  ಕೋಕ, ಪೆಪ್ಸಿ ಕುಡಿಯುವ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚು. ಕಾಯಿ - ಹಣ್ಣುಗಳನ್ನು ತಿನ್ನುತ್ತಲೆ ನಮಗೆ ಈ ವಿಷಯಗಳ ಜ್ಞಾನವಾಗುತ್ತಿತ್ತು. ಕಾಡುಗಳಲ್ಲಿ ಅಲೆಯುತ್ತಿದ್ದಂತೆ ನಿಸರ್ಗವನ್ನು ನೋಡುತ್ತ ಹೋದಂತೆ ನಾವು ಸಸ್ಯವಿಜ್ಞಾನ ಕಲಿತೆವು. ಸಸ್ಯವಿಜ್ಞಾನದ  ಸಿದ್ಧಾಂತ ನಮ್ಮ ಕಣ್ಣೆದುರಿಗೆ ಮೂರ್ತಿಮಂತಾಗಿ ನಿಲ್ಲುತ್ತಿತ್ತು. ಇದನ್ನೆಲ್ಲ ಗುರುತಿಸಲು ನಮ್ಮ ಶಿಕ್ಷಕರು ಕಲಿಸಿದರು. ಪಾಮೆಟ ಡಾಯವ್ಹರ್ಜಂಟ ರೆಟಿಕ್ಯುಲರ ಇದು ಎಲೆಗಳ ಮೇಲೆ ಕಾಣುವ ರೇಷೆಗಳು ಎಂಬುದು ಗೊತ್ತಾದಾಗ ಆ ಹೆಸರು ನಮ್ಮನ್ನು ಹೆದರಿಸಲಿಲ್ಲ. ಏಕೆಂದರೆ ನಮ್ಮ ಮನೆಯ ಹಿತ್ತಲಿನಲ್ಲಿಯ ಪಪಯಿ ಹಣ್ಣಿನ ಗಿಡದ ಎಲೆಗಳೇ ಆಗ ನಮ್ಮ ಕಣ್ಮುಂದೆ ಬಂದು ನಿಲ್ಲುತ್ತಿದ್ದವು.

ಪರೀಕ್ಷೆಗಾಗಿ ನಮ್ಮ ಏಳನೇಯ ತರಗತಿಯ ಶಿಕ್ಷಕರು ಬೇರೆಬೇರೆ ಗಿಡ ಗಂಟೆಗಳ ಎಲೆ - ಹೂವಿನ ಚಿತ್ರಸಂಪುಟ ತಯಾರಿಸಲು ಹೇಳುತ್ತಿದ್ದರು. ಅದಕ್ಕಾಗಿ ನಾವು ಸುತ್ತಮುತ್ತಲಿನ ಗುಡ್ಡ - ಕಣಿವೆಗಳಲ್ಲಿ ಬರೆಗಾಲಿನಿಂದ ಹುಡುಕುತ್ತ ಹೋಗುತ್ತಿದ್ದೆವು. ಈಗ 25-30 ವರುಷಗಳು ಸರಿದ ಮೇಲೆ  ಕೂಡ ಸೇವಾಗ್ರಾಮದ ಪರಿಸರದಲ್ಲಿಯ ಪಾಮೆಟ ಡಾಯವ್ಹರ್ಜಂಟ ರೆಟಿಕ್ಯುಲರ ಪ್ರಕಾರದ ಎಲೆಗಳು ಎಲ್ಲಿ ಎಲ್ಲಿ ಸಿಗುತ್ತವೆ ಎಂಬುದನ್ನು ಇಲ್ಲಿ ಕುಳಿತೇ ಹೇಳಬಲ್ಲೆ. ಮುಂದೆ  ಕಾಲೇಜದಲ್ಲಿ ಸಸ್ಯವಿಜ್ಞಾನ ಕಲಿಯಲಿಕ್ಕೆ ಯಾವದೇ ತೊಂದರೆ ಉಂಟಾಗಲಿಲ್ಲ. ಈ ವಿಷಯದಲ್ಲಿ ವಿಶ್ವವಿದ್ಯಾಲಯದಲ್ಲಿಯೆ ಪ್ರಥಮ ಕ್ರಮಾಂಕ ಗಳಿಸಿ ನಾನು ಪಾಸಾದಾಗ ಪ್ರೊಫೆಸರು ಬೆನ್ನು ತಟ್ಟುವಾಗ *ಈ ವಿಷಯ ನಾನು ಕಾಲೇಜದಲ್ಲಿ ಕಲಿಯಲಿಲ್ಲ ಸರ್; ಅದು ಸೇವಾಗ್ರಾಮದ ಸಾಲೆಯ ಕೊಡುಗೆ!* ಎಂದು ಮನಸ್ಸಿನಲ್ಲಿಯೆ ಅಂದುಕೊಂಡೆ.

**ಬದುಕಲಿಕ್ಕೆ ಗಣಿತ**

*ಒಂದು ನೀರು ಶೇಖರಿಸಿಟ್ಟಿರುವ ತೊಟ್ಟಿಗೆ ಎರಡು ನಲ್ಲಿಗಳಿವೆ. ಒಂದರಿಂದ ಸರಿಯಾಗಿ ನೀರು ಹರಿಯುತ್ತದೆ; ಇನ್ನೊಂದರಲ್ಲಿಂದ ನೀರು ಸೋರುತ್ತದೆ. ಹೀಗಿದ್ದಾಗ ತೊಟ್ಟಿ ಬರಿದಾಗಲಿಕ್ಕೆ ಎಷ್ಟು ವೇಳೆ ಹಿಡಿಯುವದು?* ಈ ರೀತಿಯ ಗಣಿತದ ಪುಸ್ತಕದಲ್ಲಿಯ ಉದಾಹರಣೆಗಳನ್ನು ಓದುವಾಗ ಇವುಗಳನ್ನು ಬದುಕಿನ ಸಮಸ್ಯೆಗಳಿಗೆ ಜೋಡಿಸಲು ಸಾಧ್ಯವೇ ಎಂಬ ಪ್ರಶ್ನೆ ಮನದಲ್ಲಿ ಮೂಡುವದು. ಚುರುಕು ಬುದ್ಧಿಯವನು ಸೋರುವ ನಲ್ಲಿಯನ್ನು  ಮುಚ್ಚಿ ಸಮಸ್ಯೆಯನ್ನು ಬಗೆಹರಿಸುವನು. ನಯೀ ತಾಲೀಮ ಶಾಲೆಯಲ್ಲಿ ಇಂತಹ ಜಾಣತನದ ಉತ್ತರಗಳನ್ನು ಕಂಡು ಹಿಡಿಯುತ್ತಿದ್ದರು. ಘನಾಕಾರಗಳ ಕಲ್ಪನೆ ಹಾಗು ಅದಕ್ಕೆ ಸಂಬಂಧಿಸಿದ ಗಣಿತಗಳನ್ನು ನಾನು ಹೇಗೆ ಕಲಿತೆ ಎಂಬುದನ್ನು ಹೇಳುವೆ.

ಪ್ರತಿ ದಿನದ ೩ ಗಂಟೆಗಳನ್ನು ಉತ್ಪಾದಕ ಕೆಲಸಕ್ಕೆ ವ್ಯಯಿಸಬೇಕು ಎಂಬ ಕಟ್ಟಪ್ಪಣೆ  ಆ ಶಾಲೆಯಲ್ಲಿತ್ತು. ಗಾಂಧೀಜಿಯವರ ಸ್ವಂತಶ್ರಮದ ರೊಟ್ಟಿಯ  (bread labour) ಆಗ್ರಹ ಹಾಗು ವಿನೋಬಾಜಿಯವರ ಶಿಕ್ಷಣದ  ಮುಖಾಂತರ ಸಮಾಜಕ್ಕೆ ಉಪಯೋಗವಾಗುವ ಕಾರ್ಯ ಹಾಗು ಅದರ ಜತೆ ವಿಜ್ಞಾನ ಶಿಕ್ಷಣದ ಅಭ್ಯಾಸ ಎಂಬ ಎರಡು ಉದ್ದೇಶಗಳು ಈ ಕಟ್ಟಪ್ಪಣೆಯ ಹಿಂದೆ ಇದ್ದವು. ಇದರಿಂದಾಗಿ ನಾನು ಕೆಲ ದಿನ ಆಕಳ ಕೊಟ್ಟಿಗೆಯಲ್ಲಿ ಕೆಲಸ ಮಾಡತೊಡಗಿದೆ. ಆಗ ಹೊಸದಾಗಿಯೇ ಕೊಟ್ಟಿಗೆಯನ್ನು ಕಟ್ಟುತ್ತಿದ್ದರು. ಇದಕ್ಕಾಗಿ ಪ್ರತಿಯೊದು ಆಕಳು ದಿನಕ್ಕೆ ಎಷ್ಟು ನೀರು ಕುಡಿಯುತ್ತದೆ, ಎಲ್ಲ ಆಕಳುಗಳಿಗಾಗಿ ಎಷ್ಟು ನೀರು ಶೇಖರಿಸಬೇಕಾಗಬಹುದು, ಇದಕ್ಕಾಗಿ ಎಷ್ಟು ಉದ್ದಗಲ ಹಾಗು ಆಳದ ತೊಟ್ಟಿ ಬೇಕಾಗುವದು, ಈ ತೊಟ್ಟಿಯನ್ನು ಕಟ್ಟಲಿಕ್ಕೆ ಎಷ್ಟು ಇಟ್ಟಿಗೆಗಳು ಬೇಕಾಗುವವು, ಮುಂತಾದ ವಿವರಗಳನ್ನು ಕಂಡು ಹಿಡಿಯುವ ಕೆಲಸ ನನ್ನ ಶಿಕ್ಷಕರು ನನಗೆ ಕೊಟ್ಟಿದ್ದರು. ಮುಂದಿನ ಒಂದು ವಾರದ ವರೆಗೆ ಈ ಲೆಕ್ಕಗಳು ನನ್ನನ್ನು ಸೆರೆಹಿಡಿದಿಟ್ಟವು. ಘನಾಕಾರವೆಂದರೇನು, ಬಕೇಟಿನ ಆಕಾರವಿದ್ದರೆ ಲೆಕ್ಕ ಹೇಗೆ, ಘನ ಆಳತೆಯನ್ನು ಕಂಡು ಹಿಡಿಯುವ ಬಗೆ, ತೊಟ್ಟಿಯ ಉದ್ದ - ಅಗಲಗಳ ವ್ಯತ್ಯಾಸವಾದಾಗ  ಆಳ ಹೇಗೆ ಮಾರ್ಪಾಟಾಗುತ್ತದೆ, ತೊಟ್ಟಿಯ ಗೋಡೆಗಳ ವಿಸ್ತೀರ್ಣಕ್ಕನುಸಾರವಾಗಿ ಇಟ್ಟಿಗೆಗಳ ಸಂಖ್ಯೆ ಮುಂತಾದ

ಲೆಕ್ಕದ ರೀತಿಯನ್ನು ನಾನು ಎಂಟು ದಿನಗಳಲ್ಲಿ ಕಲಿತೆ.

**ಅಡಿಗೆಮನೆಯಲ್ಲಿಂದ ಶಿಕ್ಷಣ**

ಕೆಲಸ ಮಾಡುತ್ತಲೇನೆ  ವಿಜ್ಞಾನ ಕಲಿಯುವ ಇನ್ನೊಂದು ಉದಾಹರಣೆ ಎಂದರೆ ಅಡುಗೆಮನೆ ಜವಾಬುದಾರಿ ವಹಿಸುವದು. ನಮ್ಮ ಶಾಲೆಯ ಊಟದ ಮನೆಯಲ್ಲಿ ದಿನಾಲು ನೂರು ಜನ ಊಟ ಮಾಡುತ್ತಿದ್ದರು. ಇವರಿಗಾಗಿ ಅಡುಗೆ ವ್ಯವಸ್ಥೆಯ  ಹೊಣೆಯನ್ನು ಎಂಟು ವಿದ್ಯಾರ್ಥಿ-ಶಿಕ್ಷಕರ ತಂಡಕ್ಕೆ ಸರತಿಯಾಗಿ   ಕೊಡಲಾಗುತ್ತಿತ್ತು. ಈ ತಂಡಕ್ಕೆ ವಾರಕ್ಕೆ ತಗಲುವಷ್ಟು ಹಣವನ್ನು ಕೊಡಲಾಗುತ್ತಿತ್ತು. ತಂಡದ ಸದಸ್ಯರು ಕೆಲಸವನ್ನು ಹಂಚಿಕೊಂಡು ಪೂರ್ಣ ವಾರದ ಊಟದ ವಿವರಗಳನ್ನು ಯೋಜಿಸುತ್ತಿದ್ದರು. ಆಹಾರಶಾಸ್ತ್ರದ ನಿಯಮಕ್ಕನುಸರಿಸಿ, ಎಲ್ಲರಿಗೂ ಸೇರುವಂತಹ ಹಾಗು ನಿರ್ದಿಷ್ಟ ಪಡಿಸಿದ ಹಣದಲ್ಲಿ ನೂರು ಜನರ ಭೋಜನವ್ಯವಸ್ಥೆ ಮಾಡುವದು ಒಂದು ದೊಡ್ಡ ಸವಾಲಾಗಿ ನಿಲ್ಲುತ್ತಿತ್ತು.  ಆಲೂಗಡ್ಡೆ ಅಗ್ಗವಿದ್ದರೂ ಅದರಲ್ಲಿಯ ಆಹಾರಸತ್ವಗಳ ಬಗ್ಗೆ ಓದಿದಾಗ ಅದು ಕೇವಲ ಪಿಷ್ಠಪದಾರ್ಥವೆಂದು ಕಂಡು ಬಂದಿತು. ಹೀಗಾಗಿ ಅದು ನಮ್ಮ ಯಾದಿಯಿಂದ ಹೊರಬಿತ್ತು. ಅಗತ್ಯವಾದ ಸ್ನಿಗ್ಧಾಂಶಗಳ ಬಗೆಗಿನ ಆಯ್ ಸಿ ಎಮ್ ಆರ್ ದ ಕಟ್ಟಳೆ ಪ್ರಕಾರ ಎಣ್ಣೆ ಕೊಂಡು ತಂದರೆ ಅದು ನಮ್ಮ ಬಜೆಟನ್ನು ತಲೆಕೆಳ ಮಾಡುತ್ತಿತ್ತು. ಮಾದರಿ ಗೃಹಿಣಿಯಲ್ಲಿದ್ದ ಜಾಣತನ ನಮ್ಮಲ್ಲಿರದಿದ್ದರಿಂದ ಆಹಾರಶಾಸ್ತ್ರ ಮತ್ತು ಅರ್ಥಶಾಸ್ತ್ರದ ಮೇಳ ಕೂಡುತ್ತಲೆ ಇರಲಿಲ್ಲ.  ಆದ್ದರಿಂದ ನಮ್ಮ ಆಹಾರಯೋಜನೆ ಪುಸ್ತಕದಲ್ಲಿಯೇ ಉಳಿಯುತ್ತಿತ್ತು. ಬೇಳೆ ಬೇಯಲಿಕ್ಕೆ ಸರಿ ವೇಳೆ ಗೊತ್ತಿರಲಿಲ್ಲ; ಇದರಿಂದ ಉರುವಲ ವೆಚ್ಚ ಹೆಚ್ಚುತ್ತಿತ್ತು. ರಾತ್ರಿಯ ಕತ್ತಲೆಯಲ್ಲಿ ಪಾತ್ರೆಗಳನ್ನು ತೊಳೆಯುವಾಗ ನಮ್ಮ ಈ ಸೋತು ಹೋದ ಕಾಳಗದ ವಿವರಗಳನ್ನು ನೆನಪಿಸಿ ಮರುದಿನದ ಅಡಿಗೆಯ ಯೋಜನೆ ಬಗ್ಗೆ  ಯೊಚಿಸುತ್ತಿದ್ದೆವು. ಈ ರೀತಿಯಾಗಿ ಗೃಹಅರ್ಥಶಾಸ್ತ್ರ ಮತ್ತು ಪ್ರತ್ಯಕ್ಷ ಅಡಿಗೆ ಇವುಗಳನ್ನು ನಾವು ಇಲ್ಲಿ ಕಲಿತೆವು. ಕೊತ್ತಂಬರಿಯಲ್ಲಿ 10600 ಯುನಿಟ್ಟು 'ಅ' ಜೀವಸತ್ವ ಗಳಿವೆ ಎಂಬುದನ್ನು ನಾನು ಮೆಡಿಕಲ್ ಕಾಲೇಜಿನ 10 ವರುಷಗಳಲ್ಲಿ ಕಲಿಯದೆ ಎಂಟನೆಯ ತರಗತಿಯಲ್ಲಿದ್ದಾಗ ಈ ಅಡಿಗೆ ಮನೆಯಲ್ಲಿ ಕಲಿತೆ. ಪ್ರೆಶರ್ ಕೂಕರದಲ್ಲಿಯ ಉಗಿ ಹಾಗು ಉಷ್ಣತೆಯ ಭೌತಶಾಸ್ತ್ರದ ಪಾಠಗಳನ್ನು ಕೂಡ ಇದೇ ಅಡಿಗೆಮನೆಯಲ್ಲಿ ಕಲಿತೆ.

**ಕೃಷಿ ಪ್ರಯೊಗ**

ನಮ್ಮಲ್ಲಿಯ ಪ್ರತಿ ವಿದ್ಯಾರ್ಥಿಗೆ ಕೃಷಿಗಾಗಿಯೆಂದು ಒಂದು ತುಂಡು ಗದ್ದೆಯನ್ನು ಕೊಡುತ್ತಿದ್ದರು. ಅಲ್ಲಿ ಯಾವ ಬೆಳೆ ತೆಗೆದುಕೊಳ್ಳಬೇಕು, ಭೂಮಿಯನ್ನು ಹೇಗೆ ಹದ ಮಾಡಬೇಕು, ಯಾವ ಗೊಬ್ಬರ ಯಾವಾಗ ಹಾಕಬೇಕು, ಇದೆಲ್ಲರ ಹೊಣೆ ನಮ್ಮದೇನೆ. ಗದ್ದೆಗೆ ನೀರುಣಿಸಲು ಸಾಕಷ್ಟು ಬೇಡಿಕೆ ಇದ್ದದ್ದರಿಂದ ಕೆಲ ಸಲ ರಾತ್ರಿಯವರೆಗೆ ಕೂಡಬೇಕಾಗುತ್ತಿತ್ತು. ನಡುರಾತ್ರಿಯಲ್ಲಿ ನರಿ-ತೋಳಗಳಿಗೆ ಹೆದರುತ್ತ ತಮ್ಮ ತಮ್ಮ ಭೂಮಿಗಾಗಿ ಎಲ್ಲರೂ ನೀರು ತರುತ್ತಿದ್ದರು. ಇದರ ಸಾಗುವಳಿ ಮಾಡಲು ನಮಗೆ ಕೃಷಿ ಹಾಗು ತೋಟಗಾರಿಕೆಯ ಜ್ಞಾನ ಪಡೆಯಬೇಕಾಗುತ್ತಿತ್ತು.  ಇಷ್ಟೆಲ್ಲ ಮಾಡಿದರೂ ಕೊನೆಗೆ ಅನುಭವವಿದ್ದ ರೈತರಿಗೆ ಮೊರೆ ಹೋಗಬೇಕಾಗುತ್ತಿತ್ತು. ಜಪಾನಿನಿಂದ ಭತ್ತದ ಬೆಳೆಯ ಬಗ್ಗೆ ಕಲಿತು ಬಂದಿರುವ ಮುಕ್ತೇಶ್ವರಭಾಯಿ, ದ್ರಾಕ್ಷೆಗಳ ಮೇಲೆ ಪ್ರಯೋಗ ಮಾಡುವ ಪ್ರೇಮಭಾಯಿ, ಇಸ್ರಾಇಲದಿಂದ ಮುಪ್ಪಿನ ವಯಸ್ಸಿನಲ್ಲಿ ಬಂದು ಕುದುರೆ ಹೂಡಿ ಹೊಲಗೆಲಸ ಮಾಡುವ ಶ್ರೀ ಹಲೆವಿ ಮುಂತಾದವರು ನಮ್ಮ ಸುತ್ತಮುತ್ತಲು ಕೃಷಿಕೆಲಸ ಮಾಡುತ್ತಿದ್ದರು. ಅಣ್ಣಾಸಾಹೇಬ ಸಹಸ್ರಬುದ್ಧೆ ಇವರು ಹೊಸ ಹೊಸ ಪ್ರಯೋಗಗಳ ಬಗ್ಗೆ ಸಲಹೆ ನೀಡುತ್ತಿದ್ದರು. ಇಂತಹ ವಾತಾವರಣದಲ್ಲಿ ಒಕ್ಕಲುತನ ಮಾಡುತ್ತ ಕೃಷಿ ವಿಷಯದ ಬಗ್ಗೆ ಎಷ್ಟೊ ಹೊಸ ಹೊಸ ಸಂಗತಿಗಳನ್ನು ನಾವು ಕಲಿತೆವು.

ಯಾರ ಹೊಲದಲ್ಲಿ ಹೆಚ್ಚು ಬೆಳೆ ಬರುತ್ತದೆ ಎಂಬುದರ ಬಗ್ಗೆ ನಮ್ಮಲ್ಲಿ ಸ್ಪರ್ಧೆ ಇರುತ್ತಿತ್ತು. ಬೆಳೆ ಹೆಚ್ಚು ಬರಲೆಂದು ಸಾಕಷ್ಟು ಗೊಬ್ಬರ ಹಾಕಿದರೆ ಅದು ನಷ್ಟ ಎಂಬುದು ಆಗ ಗೊತ್ತಾಯಿತು. ನಾನೇ ಒಮ್ಮೆ ಬದನೆಕಾಯಿ ದೊಡ್ಡದಾಗಲೆಂದು ಸಾಕಷ್ಟು ಗೊಬ್ಬರ - ಬಕೆಟ್ಟನಿಂದ ಗೋಮೂತ್ರ - ಸುರುವಿದಾಗ ಎರಡು ಕೇಜಿ ತೂಕದಷ್ಟು ಮಹಾಗಾತ್ರದ ಒಂದು ಬದನೆಕಾಯಿ ಬೆಳೆಸಿದೆ. ವರ್ಧಾದ ವಾರದ ಸಂತೆಯಲ್ಲಿ ಈ ಅಜಸ್ರಕಾಯದ ಬದನೆಕಾಯಿ ಮಾರಲಿಕ್ಕೆಂದು ಇಟ್ಟಾಗ ಒಬ್ಬ ಗ್ರಾಹಕನೂ ಕೂಡ ಅದನ್ನು ಕೊಳ್ಳಲಿಲ್ಲ. ಇದು ಒಂದು ಬೇರೆ ಕತೆಯೆ!

**ಸಜೀವ ಶಿಕ್ಷಣ**

ದೈಹಿಕ ಶ್ರಮದಲ್ಲಿಯೇ ವಿದ್ಯಾರ್ಥಿಗಳ ವೇಳೆ ವೆಚ್ಚವಾಗುವದರಿಂದ  ನಯೀ ತಾಲೀಮ ಶಾಲೆಯ ವಿದ್ಯಾರ್ಥಿಗಳು ಓದು-ಬರೆಗಳಲ್ಲಿ

ಹಿಂದುಳಿಯುತ್ತಾರೆ ಎಂದು ಈ ಸಾಲೆಯನ್ನು ಎಷ್ಟೊ ಜನರು ಎಷ್ಟೊ ಸಲ ದೂಷಿಸುತ್ತಿದ್ದರು. ಆಗಿನ ಮದ್ರಾಸ ರಾಜ್ಯದಲ್ಲಿ ಬುನಾದಿ ಶಿಕ್ಷಣವನ್ನು ಕಡ್ಡಾಯ  ಮಾಡಿದಾಗ ನಮ್ಮ ಮಕ್ಕಳನ್ನು ದೈಹಿಕ ಶ್ರಮದಲ್ಲಿ ಸಿಕ್ಕಿಸಿ ಅಭ್ಯಾಸದಲ್ಲಿ ಹಿಂದುಳಿಸುತ್ತಾರೆ ಎಂಬ ತಪ್ಪುತಿಳಿವಳಿಕೆಯಿಂದಾಗಿ ಆಗಿನ ಮುಖ್ಯ ಸಚಿವರಿಗೆ ರಾಜಿನಾಮೆ ಕೊಡಬೇಕಾಯಿತು.

ಎಲ್ಲ ತರದ ಆವಶ್ಯಕ ಹಾಗು ಅನಾವಶ್ಯಕ ಮಾಹಿತಿಯನ್ನು ಕಲಿಯುವ ಮಕ್ಕಳ ತಲೆಯಲ್ಲಿ ತುಂಬಿ  ಪರೀಕ್ಷೆ ವೇಳೆಯಲ್ಲಿ ಮಾತ್ರ ಜಾದುಗಾರನ ಟೊಪ್ಪಿಗೆಯಿಂದ ಹೊರಬಂದಂತೆ ಒಂದಾದ ಮೇಲೆ ಒಂದರಂತೆ ಮಾಹಿತಿಯನ್ನು ಹೊರ ಎಗೆಯುತ್ತ ಹೋಗುವದಕ್ಕೆ ಜ್ಞಾನ ಎಂಬುದರ ಮೆಲೆ ನಂಬಿಗೆ ಇರುವವರಿಗೆ ಈ ದೂಷಣೆ ಸರಿಯೆನ್ನಿಸಬಹುದು. ಗಂಧಕಾಮ್ಲದ ಉತ್ಪಾದನೆಯ ನಾಲ್ಕು ಪದ್ಧತಿಗಳನ್ನು ವಿವರಿಸುವದನ್ನು ತಪ್ಪಿದಲ್ಲಿ ಆತ ರಸಾಯನ ಶಾಸ್ತ್ರದಲ್ಲಿ ಹಿಂದುಳಿದವ ಎಂದು ನಿರ್ಣಯಿಸಬಹುದು. ಆದರೆ ಒಂಬತ್ತನೆ ತರಗತಿಯ ವಿದ್ಯಾರ್ಥಿಗೆ ಈ ಮಾಹಿತಿಯ ಉಪಯೋಗವೇನು ಎಂಬುದು ಇಂತಹ ಮಹನೀಯರಿಗೆ ಸಂಬಂಧಿಸಿದ  ಸಮಸ್ಯೆಯಲ್ಲ. ಅದರೆ ಬದುಕಲಿಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಆಳವಾಗಿ ಅಭ್ಯಸಿಸಿದ ನಯೀ ತಾಲೀಮ ಶಾಲೆಯ ವಿದ್ಯಾರ್ಥಿಗಳು  ಜೀವನದ ಹೋರಾಟದಲ್ಲಿ ಯಶಸ್ಸು ಗಳಿಸುತ್ತಿದ್ದರು. ಹೀಗಿದ್ದರೂ ಈ ಮಕ್ಕಳಿಗೆ ಚರಿತ್ರೆ, ಭೂಗೋಲ, ರಾಜನೀತಿ ಗೊತ್ತಿಲ್ಲ ಎಂದು ಅನ್ನುವವರಿಗೆ ಏನು ಮಾಡಬೇಕು?

ಭೂಗೋಲ ಈ ವಿಷಯವನ್ನು ಈ ಜಾದೂ ತರಹದ ಶಾಲೆಯಲ್ಲಿ  ಉಳಿದವರು ಕಲಿತಂತೆ ನಾವು ಕಲಿಯಲಿಲ್ಲ. ದೇಶದ ವಿವಿಧ ಭಾಗಗಳಿಂದ ಮತ್ತು ಹೊರದೇಶಗಳಿಂದ ಬರುವ ಅತಿಥಿಗಳ ಭಾಷಣ ಹಾಗು ಅವರ ಜತೆಗಿನ ಪ್ರಶ್ನೊತ್ತರ, ಅಂಚೆ ಚೀಟಿ ಸಂಗ್ರಹಿಸುವ ಹವ್ಯಾಸ, ಕಥೆ- ಕಾದಂಬರಿಗಳನ್ನು ಓದುವಾಗ ಹಿನ್ನೆಲೆಯಲ್ಲಿರುವ ಪ್ರದೇಶಗಳ ಪರಿಚಯ, ಇವೆಲ್ಲವುಗಳಿಂದ ನಮ್ಮ ಭೂಗೋಲ ವಿಷಯದ ಜ್ಞಾನ ಸಮ್ಮೃದ್ಧವಾಗುತ್ತಿತ್ತು. ಒಂಬತ್ತನೆ ತರಗತಿಯಲ್ಲಿದ್ದಾಗ ಶರತ್ಚಂದ್ರ ಇವರ ಪಥೆರ ದಾವಿ ಮತ್ತು ಮೆಘಾಣಿಯವರ ಪ್ರಭು ಪಧಾರೆ ಈ ಪುಸ್ತಕಗಳನ್ನು ಓದಿ ನಾನು ಬ್ರಹ್ಮದೇಶವನ್ನು ಸುತ್ತಾಡಿ ಬಂದೆ. ಭೂಗೋಲ ನನಗೆ ಜಿವಂತ ವಿಷಯವಾಗಿತ್ತು; ತಲೆನೋವಿನ ವಿಷಯವಲ್ಲ.

ರಾಜನೀತಿ ಮತ್ತು ಸಾಮಾನ್ಯಜ್ಞಾನ ಕಲಿಸುವದಕ್ಕಾಗಿ ನಮ್ಮ ಶಿಕ್ಷಕರು ಬೇರೆ ರೀತಿಯನ್ನೆ ಅಳವಡಿಸುತ್ತಿದ್ದರು. ದಿನ ಸಂಜೆ ನಮ್ಮೆಲ್ಲರನ್ನು ಕೂಡಿಸಿ ಅ ದಿನದ ವೃತ್ತಪತ್ರಗಳಲ್ಲಿಯ ಮಹತ್ವದ ಹಾಗು ಮನ ಸೆರೆಸುವ ಸುದ್ದಿಗಳನ್ನು ಓದಿ ತಿಳಿಸುತ್ತಿದ್ದರು. ಅ ಘಟನೆಗಳ ಬಗ್ಗೆ ಓದುವಾಗ ಘಟನೆಯ ಇತಿಹಾಸ,  ಅಲ್ಲಿಯ ರಾಜಕೀಯ ಹಿನ್ನೆಲೆ ಮುಂತಾದವುಗಳ ಬಗ್ಗೆ ಹೇಳುತ್ತಿದ್ದರು. ಕ್ಯೂಬಾಕ್ಕೆ ರಶಿಯ ಕಳಿಸಿದ ಅಣ್ವಸ್ತ್ರಗಳು ಹಾಗು ಅವುಗಳನ್ನು ತಡೆಹಿಡಿಸಲು ಅಮೇರಿಕೆ ಮಾಡುತ್ತಿದ್ದ ಯತ್ನ ಆ ಕಾಲದ ಅತೀ ಮಹತ್ವದ ವಾರ್ತೆಗಳಾಗಿದ್ದವು. ಇದನ್ನೇ ಆಧರಿಸಿ ಎರಡನೆ ಮಹಾಯುದ್ಧ, ಅದರ ನಂತರದ ಬಂಡವಳ ದೇಶಗಳ ಮತ್ತು ಸಾಮ್ಯವಾದಿ ದೇಶಗಳ ನಡುವಿನ ಶೀತಯುದ್ಧ, ಈ ಸಿದ್ಧಾಂತಗಳಲ್ಲಿ ಹಂಚಿ ಹೋದ ಜಾಗತಿಕ ಸ್ಥಿತಿ, ಅಮೇರಿಕೆ ಹಾಗು ರಶಿಯದ ನಡುವಿದ್ದ ಹಗೆತನ, ಕ್ಯೂಬಾದಲ್ಲಿಯ ಕ್ರಾಂತಿ, ಇವೆಲ್ಲವುಗಳ ಬಗ್ಗೆ ನಮ್ಮ ಶಿಕ್ಷಕರು ತಿಳಿಸಿ ಹೇಳುತ್ತಿದ್ದರು. ಸ್ವಿತ್ಝರ್ಲಂಡಕ್ಕೆ ಹೆಲ್ವೆಟಿಯಾ ಎಂಬ ಇನ್ನೊಂದು ಹೆಸರಿದೆ ಎಂಬ ಮಾಹಿತಿ ಅಂಚೆ ಚೀಟಿಯಿಂದಾಗಿ ನನಗೆ ತಿಳಿಯಿತು. ಈ ರೀತಿಯಲ್ಲಿಯೆ ನಾನು ಇತಿಹಾಸ ಕಲಿತೆ.

**ಆಧುನಿಕ ಪದ್ಧತಿ**

ಗಾಂಧೀಜಿಯವರ ಶಿಕ್ಷಣವಿಚಾರ, ರವೀಂದ್ರನಾಥರ ಕಲೆಯ ಬಗೆಗಿನ ಪ್ರೀತಿ, ಮತ್ತು ಇವುಗಳನ್ನು ವಾಸ್ತವಕ್ಕೆ ತರಲು ವಿವಿಧ ರೀತಿಯ ಸೃಜನಶೀಲ ಶಿಕ್ಷಣ ಪದ್ಧತಿಯ ಸಾಕಷ್ಟು ಉದಾಹರಣೆಗಳು ನಮ್ಮ ಕಣ್ಮುಂದಿವೆ. ಪರೀಕ್ಷೆಗಳಲ್ಲಿ ಪೇಪರು ಬಿಡಿಸುವ ಜತೆ ಪ್ರತ್ಯಕ್ಷವಾಗಿ ಒಕ್ಕಲುತನ, ಅಡಿಗೆ ಮಾಡುವದರಿಂದ ಹಿಡಿದು ನಾಟಕಗಳಲ್ಲಿ ಪಾತ್ರ ವಹಿಸುವವರೆಗಿನ ಎಷ್ಟೋ ಚಟುವಟಿಕೆಗಳಲ್ಲಿ, ಭಾಷಣ, ಲೇಖನ ಮುಂತಾದವುಗಳಲ್ಲಿ ಕೂಡ ನಮ್ಮ ಪರೀಕ್ಷೆ ಯಾಗುತ್ತಿತ್ತು. ಹೊಸ ಹೊಸ ಪ್ರಯೋಗಳಿಗಾಗಿಯೆ ಈ ಶಾಲೆಯ ಕೋಣೆಗಳು ಎಂದು ರೂಢವಾಯಿತು. ಎಲ್ಲರಿಗೂ ಎಲ್ಲ ವಿಷಯಗಳು ಸೇರಲೆಬೇಕು ಎಂಬ ಕಟ್ಟಪ್ಪಣೆ ಅಲ್ಲಿ ಇರಲಿಲ್ಲ. ವಿದ್ಯಾರ್ಥಿಗೆ ಕೆಲ ವಿಷಯಗಳಲ್ಲಿ ಹೆಚ್ಚು ಗುಣಗಳು ಬೀಳುತ್ತಿದ್ದರೆ ಇನ್ನು ಕೆಲ ವಿಷಯಗಳಲ್ಲಿ ಕಡಿಮೆ ಗುಣಗಳು ದೊರೆಯುತ್ತಿದ್ದವು. ಹೀಗಾಗಿ ಎಲ್ಲರನ್ನು ಎಲ್ಲ ವಿಷಯಗಳನ್ನು ಕಲಿಯುವದಕ್ಕಾಗಿ ಒಂದೇ ವರ್ಗದಲ್ಲಿ ಕೂಡುವ ಅವಶ್ಯಕತೆ ಇರಲಿಲ್ಲ.  ಇದನ್ನು ಲಕ್ಷಿಸಿ ಅವರವರಿಗೆ ಹಿಡಿಸಿದ ವಿಷಯಗಳನ್ನು ಕಲಿಯಲಿಕ್ಕೆ ಬೇರೆ ಬೇರೆ ತರಗತಿಯಲ್ಲಿ ಹೋಗಿ ಕೂಡಲಿಕ್ಕೆ ಅನುಮತಿ ಇತ್ತು. ನಾನು ಒಂದೇ ವರುಷದಲ್ಲಿ ಇಂಗ್ಲಿಶ್ ಕ್ಕಾಗಿ  ಏಳನೆತ್ತೆ, ಗಣಿತಕ್ಕಾಗಿ ಒಂಬತ್ತನೆತ್ತೆ, ಮತ್ತು ಮಾತೃಭಾಷೆಗಾಗಿ ಹತ್ತನೆತ್ತೆಯ ತರಗತಿಗಳಲ್ಲಿ ಕೂಡುತ್ತಿದ್ದೆ.

ಬುನಾದಿ ಶಿಕ್ಷಣವು ಈ ಪದ್ಧತಿಯ ಅವಿಭಾಜ್ಯ ಅಂಗವಾಗಿತ್ತು. ದುಡಿಕೆಗೆ ಪ್ರತಿಷ್ಠೆ, ಸ್ವಾವಲಂಬನೆ, ಸಮತೆ, ಸಾಮೂಹಿಕತೆ ಇವುಗಳನ್ನು ನಾವು ದಿನನಿತ್ಯ ಆಚರಿಸುತ್ತ  ಪ್ರತ್ಯಕ್ಷ ಜೀವನದಲ್ಲಿ ಉಪಯೋಗಿಸುತ್ತಿದ್ದೆವು. ಇದೇ ರೀತಿಯಾಗಿ ಈ ಮೌಲ್ಯಗಳನ್ನು ಬೇರೂರಿಸಲಿಕ್ಕಾಗಿ ಹೊರಗೆ ನಡೆಯುತ್ತಿರುವ ಸಮುದಾಯ ಪರಿವರ್ತನೆಯ ಚಳುವಳಿಗಳಲ್ಲಿ ಕೂಡ ವಿದ್ಯಾರ್ಥಿಗಳು ಹುರುಪಿನಿಂದ ಪಾಲ್ಗೊಳ್ಳುತ್ತಿದ್ದರು. ಭೂದಾನ ಚಳುವಳಿಯ ವೇಳೆಯಲ್ಲಿ ಇಡೀ ಶಾಲೆಯೇ ಪಾಲ್ಗೊಳ್ಳುತ್ತಿದ್ದರಿಂದ ಕೆಲ ದಿನ ಶಾಲೆಯನ್ನು ಮುಚ್ಚುವ ಪ್ರಸಂಗ ಬರುತ್ತಿತ್ತು.

**ಮಾಯವಾದ ನಡುಗಡ್ಡೆ**

ನನ್ನ ಈ ಶಾಲೆಯ ವರ್ಣನೆಯನ್ನು ಕೇಳಿದವರೆಲ್ಲರು ಈ ಶಾಲೆಯಲ್ಲಿದೆ, ನಾವೂ ನಮ್ಮ ಮಕ್ಕಳನ್ನು ಈ ಶಾಲೆಗೆ ಕಳಿಸುವೆವು ಎಂದು ಪ್ರಶ್ನಿಸುತ್ತಾರೆ.  ಗಾಂಧೀಜಿಯವರ ಗ್ರಾಮೋದ್ಯೋಗದ ಕಲ್ಪನೆಗೆ ಕಸಬುಟ್ಟಿ ತೋರಿಸಿದ  ಶಾಸನದ ಧೋರಣೆಯಿಂದಾಗಿ ಪ್ರಸ್ಥಾಪಿತ ಕಾರಖಾನೆಗಳ ಜತೆಯ ಸ್ಪರ್ಧೆಯಲ್ಲಿ ಅದು ಕೊನೆಯ ಕ್ರಮಾಂಕದಲ್ಲಿದೆ. ಶಾಸನದ ಅಧಿಕೃತ ಮಾನ್ಯತೆ ಇಲ್ಲದ ಇಂತಹ ಶಾಲೆಗಳಲ್ಲಿ ಕಲಿತ ಮಕ್ಕಳಿಗೆ ಶೈಕ್ಷಣಿಕ ಭವಿತವ್ಯವಿರಲಿಲ್ಲ. ಕೇವಲ ಇದೇ ಕಾರಣದಿಂದಾಗಿ ಪಾಲಕರು ಈ ಶಾಲೆಗೆ ಮಕ್ಕಳನ್ನು ಕಳಿಸುವದನ್ನು ನಿಲ್ಲಿಸಿಬಿಟ್ಟರು. ಭೂದಾನ - ಗ್ರಾಮದಾನ ಚಳುವಳಿಗಳಲ್ಲಿ ಭಾಗವಹಿಸಿದ ಕೆಲ ಕಾರ್ಯಕರ್ತರು ತಮ್ಮ ಮಕ್ಕಳನ್ನು ಈ ಶಾಲೆಗೆ ಕಳಿಸಿಕೊಟ್ಟಿದ್ದರೂ ಮುಂದಿನ ಕೆಲ ದಿನಗಳಲ್ಲಿಯೇ ಶಾಲೆ ಪಟದಿಂದ ಮಕ್ಕಳನ್ನು ವಜಾ ಮಾಡಿದರು. ಸಮಾಜಕ್ಕೆ ಮತ್ತು ಶಾಸನಕ್ಕೆ ಈ ರೀತಿಯ ಶಿಕ್ಷಣ ಬೇಕಾಗಿರಲಿಲ್ಲ. ಇದೇ ನ್ಯೂನಗಂಡದಿಂದಾಗಿ ವಿದ್ಯಾರ್ಥಿಗಳೆಲ್ಲ ನೊಂದುತ್ತಿದ್ದರು. ಯಾವದೇ ಪರಿವರ್ತನೆಯ ನಡುಗಡ್ಡೆ ಸುತ್ತಮುತ್ತಲಿನ ವಿರೋಧದ ವಾತಾವರಣದಲ್ಲಿ ಹೆಚ್ಚು ಕಾಲ ತಾಳಲು ಶಕ್ಯವಿಲ್ಲ. ಗ್ರಾಮದಾನ - ಭೂದಾನಗಳು ಮಾಯವಾದಂತೆ ಸಮಾಜದ ಸ್ವಾರ್ಥ ಹಾಗು ಸ್ಪರ್ಧೆಗಳ ಅಲೆಯುಬ್ಬರಗಳು ಒಂದು ದಿನ ಈ ಅದ್ಭುತವಾದ ನಡುಗಡ್ಡೆಯನ್ನು ನುಂಗಿದವು.

ನಾನು ನನ್ನ ಮಕ್ಕಳನ್ನು ಇಲ್ಲಿ ಕಳಿಸಬಯಸುತ್ತೇನೆ. ಆದರೆ ಈ ಜಾದೂ ತರಹದ ನಡುಗಡ್ಡೆ ಈಗ ಇದೆ ಎಲ್ಲಿ?

ಡಾ. ಅಭಯ ಬಂಗ

ಶೋಧಗ್ರಾಮ, ಗಡಚಿರೋಲಿ, 442605

ಅನುವಾದಕ: ಪ್ರಭಾಕರ ನಾನಾವಟೀ

Traslated by Prabhakar Nanawaty

email: pkn.ans@gmail.com